# ಕ್ಲಿಪ್-ಶಾರ್ಟ್ ಯೂಟ್ಯೂಬ್‌ನ ಹೊಸತು

■ ಶಶಿಕುಮಾರ್ ಸಿ.



ಗೂಗಲ್‌ನ ಅತ್ಯಂತ ಪರಿಣಾಮಕಾರಿ ಹಾಗೂ ಜನಬಳಕೆಯ ಆ್ಯಪ್‌ಗಳಲ್ಲಿ ಯೂಟ್ಯೂಬ್ ಸಹ ಒಂದು. ಸ್ಮಾರ್ಟ್‌ಫೋನ್ ಹಾಗೂ ಗ್ಯಾಜೆಟ್ ಬಳಕೆಯ ಬಹುತೇಕ ಜನರು ವಿಡಿಯೊ ವೀಕ್ಷಣೆಗೆ ಹೆಚ್ಚು ಅವಲಂಬಿತರಾಗಿರುವ ಯೂಟ್ಯೂಬ್, ತನ್ನ ಬಳಕೆದಾರರಿಗೆ ವಿಶೇಷ ಫೀಚರ್ಸ್ ಪರಿಚಯಿಸಿದೆ. ಅದುವೇ 'ಶಾರ್ಟ್ ಲೂಪಿಂಗ್ ಕ್ಲಿಪ್' ಆಯ್ಕೆ.

ಕೆಲವೇ ಸೆಕೆಂಡ್‌ಗಳ ವಿಡಿಯೊಗಳು ಈಗ ಹೆಚ್ಚು ಟ್ರೆಂಡ್‌ನಲ್ಲಿ ಇರುವ ಕಾರಣಕ್ಕೆ 'ಮೆಟಾ' ಕಂಪನಿಯು ಇನ್‌ಸ್ಟಾಗ್ರಾಂನ ರೀಲ್ಸ್‌ಗೆ ಹೆಚ್ಚು ಆದ್ಯತೆ ನೀಡಿರುವಂತೆಯೇ ಯೂಟ್ಯೂಬ್ ಅದೇ ಮಾದರಿಯ ವಿಡಿಯೊಗಳತ್ತ ಗಮನ ಹರಿಸಿದೆ. ಅದರ ಪ್ರಾರಂಭಿಕ ಪ್ರಯತ್ನವಾಗಿ ಯೂಟ್ಯೂಬ್‌ನಲ್ಲಿ ಶಾರ್ಟ್ ಲೂಪಿಂಗ್ ಕ್ಲಿಪ್ ಎಂಬ ವಿಶೇಷ ಫೀಚರ್ಸ್ ಅನ್ನು ಪರಿಚಯಿಸಿದೆ. ಆ ಫೀಚರ್ಸ್, ರೀಲ್ಸ್‌ನಂತೆಯೇ ಟ್ರೆಂಡ್ ಸೃಷ್ಟಿಸುವತ್ತ ದಾಪುಗಾಲಿಟ್ಟಿದೆ.

ಯೂಟ್ಯೂಬ್ ವಿಡಿಯೊಗಳ ಸಾಗರ. ಅಲ್ಲಿ ಸಿನಿಮಾಗಳು, ಕಿರುಚಿತ್ರಗಳು, ವಿಡಿಯೊ ಸಾಂಗ್‌ಗಳು, ಮಾಹಿತಿಪೂರ್ಣ ವಿಡಿಯೊಗಳು ಲಭ್ಯ. ವಿಡಿಯೊಗಳನ್ನು ಅಪ್‌ಲೋಡ್ ಮಾಡಲು ಯೂಟ್ಯೂಬ್ ಅವಕಾಶ ಕಲ್ಪಿಸಿದೆ. ಒಮ್ಮೆ ಅಪ್‌ಲೋಡ್ ಮಾಡಿದರೆ ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಯಾರು ಬೇಕಾದರೂ ಆ ವಿಡಿಯೊವನ್ನು ವೀಕ್ಷಿಸಬಹುದು.

ಬಳಕೆದಾರರು ಯೂಟ್ಯೂಬ್‌ನಲ್ಲಿನ ತಮ್ಮಿಷ್ಟದ ವಿಡಿಯೊದಲ್ಲಿ ಕೆಲವೇ ಸೆಕೆಂಡ್‌ಗಳ ದೃಶ್ಯವನ್ನು ನಕಲಿಸಿ ಹಂಚಿಕೊಳ್ಳಬಹುದು. ತಮ್ಮಿಷ್ಟದ ದೊಡ್ಡ ಗಾತ್ರದ ವಿಡಿಯೊಗಳಲ್ಲಿ ಇರುವ ಸ್ಮರಣೀಯ ಕ್ಷಣಗಳನ್ನು ಸುಲಭವಾಗಿ ಹೈಲೈಟ್ ಮಾಡಲು ಕ್ರಿಯೇಟರ್ಸ್ ಮತ್ತು ಅಭಿಮಾನಿಗಳಿಗೆ ಈ ಆಯ್ಕೆಯು ದೊಡ್ಡ ಅಸ್ತ್ರವಾಗಿದೆ.

### ಶಾರ್ಟ್ ಲೂಪಿಂಗ್ ಹೇಗೆ?

ಮೊದಲು ಯೂಟ್ಯೂಬ್ ಆ್ಯಪ್ ಅನ್ನು ಅಪ್‌ಡೇಟ್ ಮಾಡಬೇಕು. ನಂತರ ಆ್ಯಪ್ ತೆರೆದು ಇಷ್ಟದ ವಿಡಿಯೊವನ್ನು ಪ್ಲೇ ಮಾಡಬೇಕು. ನಂತರ ಪ್ಲೇ ಆಗುವ ವಿಡಿಯೊದ ಕೆಳಭಾಗದಲ್ಲಿ ಕಾಣುವ ಕ್ಲಿಪ್ ಆಯ್ಕೆಯನ್ನು ಕ್ಲಿಕ್ಕಿಸಿ ವಿಡಿಯೊದಲ್ಲಿನ ದೃಶ್ಯವು ಅಥವಾ ಸನ್ನಿವೇಶವನ್ನು ಆಯ್ಕೆ ಮಾಡಿಕೊಂಡ ಬಳಿಕ 'ಶೇರ್ ಕ್ಲಿಪ್ ಆಯ್ಕೆ'ಯನ್ನು ಒತ್ತಿದರೆ ದೃಶ್ಯದ ಲಿಂಕ್–ಕಾಪಿ ಆಗುತ್ತದೆ. ಅದನ್ನು ಹಂಚಿಕೊಳ್ಳಬಹುದು. ಆ ಲಿಂಕ್ ಅನ್ನು ಕ್ಲಿಕ್ಕಿಸಿದರೆ ಯೂಟ್ಯೂಬ್‌ನ ಮೂಲ ವಿಡಿಯೊಗೆ ಆಯ್ಕೆ ಮಾಡಿಕೊಂಡ ವಿಡಿಯೊದ ತುಣುಕಷ್ಟೇ ಪ್ಲೇ ಆಗುತ್ತದೆ. ಹೀಗೆ 60 ಸೆಕೆಂಡುಗಳವರೆಗಿನ ವಿಡಿಯೊವನ್ನು ಕಾಪಿ ಮಾಡಿ ಹಂಚಿಕೊಳ್ಳಬಹುದು.



### ಶಾರ್ಟ್ ಕ್ರಿಯೇಟ್ ಹೇಗೆ?

ಕ್ಲಿಪ್ ಫೀಚರ್ಸ್ ಜೊತೆಗೆ ರೀಲ್ಸ್ ಮಾದರಿಯ ವಿಡಿಯೊ ರೂಪಿಸಲು ಯೂಟ್ಯೂಬ್ 'ಶಾರ್ಟ್' ಎಂಬ ಹೊಸ ಆಯ್ಕೆಯನ್ನು ಪರಿಚಯಿಸಿದೆ. ಈ ಆಯ್ಕೆಯ ಮೂಲಕ ಹೊಸದಾಗಿ ವಿಡಿಯೊ ಮಾಡಿ ಅದನ್ನು ಎಡಿಟ್ ಮಾಡಿ ಮ್ಯೂಸಿಕ್ ಸೇರಿಸಿ ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಬಹುದು. ಇದೂ ಸಹ ಯೂಟ್ಯೂಬ್‌ನಲ್ಲಿ ಟ್ರೆಂಡ್‌ನಲ್ಲಿದೆ.

ಯೂಟ್ಯೂಬ್ ಆ್ಯಪ್‌ನ ಕೆಳಭಾಗದಲ್ಲಿ ಪ್ಲಸ್ ಚಿಹ್ನೆ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿದರೆ 'ಕ್ರಿಯೇಟ್ ಎ ಶಾರ್ಟ್' ಎಂಬ ಆಯ್ಕೆ ಕಾಣುತ್ತದೆ ಅದನ್ನು ಕ್ಲಿಕ್ಕಿಸಿ ಸೃಜನಾತ್ಮಕವಾಗಿ ವಿಡಿಯೊ ಸೆರೆಹಿಡಿದು ಅದನ್ನು ಸಂಗೀತ, ಟೆಕ್ಸ್ಟ್, ಟೈಮ್‌ಲೈನ್, ಫಿಲ್ಟರ್ ಆಯ್ಕೆಯನ್ನು ಬಳಸಿ ಇನ್ನಷ್ಟು ಆಕರ್ಷಕವಾಗಿಸಿ ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಬಹುದು. ಈ ವಿಡಿಯೊವನ್ನೂ ಸಹ 60 ಸೆಕೆಂಡುಗಳವರೆಗೆ ಚಿತ್ರೀಕರಿಸಬಹುದು. ■

## ವಾಟ್ಸಾಪ್ ವಾಯ್ಸ್‌ಗೆ ಹೊಸ ಸ್ಪರ್ಶ

ವಾಟ್ಸಾಪ್‌ನ ವಾಯ್ಸ್ ನೋಟ್ ಫೀಚರ್ಸ್‌ನ ವಾಯ್ಸ್ ರೆಕಾರ್ಡಿಂಗ್ ಸೇವೆಯನ್ನು ಹೆಚ್ಚು ಬಳಸುತ್ತಿರುವ ಬಳಕೆದಾರರಿಗೆ ಸಹಕಾರಿಯಾಗಲೆಂದು ಈ ಫೀಚರ್‌ಗೆ ಹೊಸ ಸ್ಪರ್ಶ ನೀಡಲು ಮೆಟಾ ಕಂಪನಿ ಮುಂದಾಗಿದೆ. ವಾಯ್ಸ್ ರೆಕಾರ್ಡಿಂಗ್ ಮತ್ತು ಸೆಂಡ್ ಮಾಡುವ ವಿಧಾನವನ್ನು ಇನ್ನಷ್ಟು ಸುಲಭಗೊಳಿಸುವ ನಿಟ್ಟಿನಲ್ಲಿ ಕಂಪನಿ ಕಾರ್ಯೋನ್ಮುಖವಾಗಿದೆ.

ಈಗಿರುವ ವಾಯ್ಸ್ ನೋಟ್ ಫೀಚರ್ಸ್ ಬಳಸಿಕೊಂಡು ರೆಕಾರ್ಡ್ ಮಾಡಿ ಕಳುಹಿಸಲು ಮಾತ್ರ ಸಾಧ್ಯವಿದೆ. ರೆಕಾರ್ಡಿಂಗ್ ಮಧ್ಯದಲ್ಲಿ ರೆಕಾರ್ಡ್ ಆಗುವುದನ್ನು ಅರ್ಧಕ್ಕೆ ನಿಲ್ಲಿಸಿ ಮತ್ತೆ ರೆಕಾರ್ಡ್ ಮಾಡುವ ಪಾಸ್ ಆಯ್ಕೆಯೂ ಇಲ್ಲ. ಇದರಿಂದ ಕೆಲವೊಮ್ಮೆ ಅನವಶ್ಯಕ ಅಂಶಗಳೂ ರೆಕಾರ್ಡ್ ಆಗಿ ಹಾಗೆಯೇ ಕಳುಹಿಸುವ ಅನಿವಾರ್ಯವಿತ್ತು. ರೆಕಾರ್ಡ್ ಆಯ್ಕೆಯನ್ನು ಒತ್ತಿಹಿಡಿಯದೇ ರೆಕಾರ್ಡ್ ಮಾಡುವ ಅವಕಾಶವೂ ಈಗಿಲ್ಲ.

ಈ ಫೀಚರ್ಸ್‌ನ ಹೊಸ ಅಪ್‌ಡೇಟ್‌ನಲ್ಲಿ ಪಾಸ್ ಆಯ್ಕೆ ಲಭ್ಯವಿರಲಿದೆ. ಎಷ್ಟು ಬೇಕು ಅಷ್ಟು ರೆಕಾರ್ಡ್ ಆಗುವವರೆಗೆ ಕಾದು ಪಾಸ್ (Pause) ಮಾಡಿ ಮತ್ತೆ ಬೇಕೆಂದಾಗ ಅನ್‌ಪಾಸ್ ಮಾಡಿದರೆ ರೆಕಾರ್ಡ್ ಶುರು ಆಗಲಿದೆ. ಅಲ್ಲದೇ ರೀಸ್ಟಾರ್ಟ್ ಆಯ್ಕೆಯೂ ಇಲ್ಲಿ ಲಭ್ಯವಾಗಲಿದೆ. ಇದು ಈಗಿರುವ ಆಯ್ಕೆಗಿಂತಲೂ ಹೆಚ್ಚು ಸಹಕಾರಿ. ಪೂರ್ತಿ ರೆಕಾರ್ಡ್ ಆಗುವವರೆಗೆ ರೆಕಾರ್ಡ್ ಆಯ್ಕೆಯನ್ನು ಒತ್ತಿಹಿಡಿಯುವ ಉಸಾಬರಿಯೂ ಹೊಸ ಅಪ್‌ಡೇಟ್‌ನಿಂದ ತಪ್ಪಲಿದೆ. ಒಮ್ಮೆ ರೆಕಾರ್ಡ್ ಆಯ್ಕೆಯನ್ನು ಒತ್ತಿದರೆ ತಾನಾಗಿಯೇ ರೆಕಾರ್ಡ್ ಆಗುವುದು. ಸಾಕೆನಿಸಿದಾಗ ಸ್ಟಾಪ್ ಆಯ್ಕೆಯನ್ನು ಒತ್ತಿದರೆ ರೆಕಾರ್ಡ್ ಪೂರ್ಣಗೊಳ್ಳುತ್ತದೆ. ವಾಯ್ಸ್ ಮೆಸೇಜ್ ಕಳುಹಿಸುವ ಪ್ರಕ್ರಿಯೆಯೂ ವೇಗಸ್ಪರ್ಶ ಪಡೆಯಲಿದೆ.

ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಐಮೆಸೇಜ್ ಮತ್ತು ಲಿಂಕ್ಡ್‌ಇನ್‌ನಲ್ಲಿ ಇರುವಂತೆಯೇ ವಾಟ್ಸಾಪ್‌ನಲ್ಲೂ ಮೆಸೇಜ್ ರಿಯಾಕ್ಷನ್ ಫೀಚರ್ಸ್ ಕೂಡ ಸದ್ಯದಲ್ಲೇ ಆಂಡ್ರಾಯ್ಡ್ ಬಳಕೆದಾರರಿಗೆ ಲಭ್ಯ. ವಾಟ್ಸಾಪ್ ವೆಬ್ ಬಳಕೆದಾರರಿಗೂ ಈ ಆಯ್ಕೆ ಸಿಗಲಿದೆ. ವಾಟ್ಸಾಪ್ ಮೆಸೇಜ್ ರಿಯಾಕ್ಷನ್ ಫೀಚರ್ಸ್ ಎಮೋಜಿ ಐಕಾನ್‌ಗಳೊಂದಿಗೆ ಪ್ರತಿಕ್ರಿಯಿಸಬಹುದು. ಫೇಸ್‌ಬುಕ್‌ನ ಪೋಸ್ಟ್‌ಗಳಿಗೆ ಪ್ರತಿಕ್ರಿಯಿಸುವಂತೆಯೇ ವಾಟ್ಸಾಪಿನಲ್ಲೂ ಪ್ರತಿಕ್ರಿಯಿಸಬಹುದು. ಜೊತೆಗೆ ಫೇಸ್‌ಬುಕ್‌ನಲ್ಲಿರುವಂತೆಯೇ ಕವರ್ ಫೋಟೊ ಆಯ್ಕೆಯನ್ನು ವಾಟ್ಸಾಪಿನಲ್ಲೂ ಕಲ್ಪಿಸುವ ನಿಟ್ಟಿನಲ್ಲಿ ಮೆಟಾ ತೊಡಗಿದೆ. ■